# ವಿಶಾಲಾಕ್ಷಿ ರಾಜಕೀಯ

ಸ್ಪಾನ ಖಾಸಗಿ. ಆದರೆ, ಸಿನಿಮಾದಲ್ಲಿ ಅದನ್ನು ತೋರುವುದು ನಾಜೂಕು. ಟಬ್‌ನೊಳಗೆ ತುಂಬಿದ ನೊರೆನೀರಿನಲ್ಲಿ ಮಾಗಿದ ನಟಿ ಇಳಿಯುವ ಮುನ್ನ ಕೆಲವು ಷರತ್ತುಗಳನ್ನು ಹಾಕಿದ್ದರು. ಸಿನಿಮಾ ದುನಿಯಾದಲ್ಲಿ ಗೆದ್ದಿದ್ದ ನಿರ್ದೇಶಕರಿಗೂ ಅಂಥ ಸೂಕ್ಷ್ಮಗಳಿದ್ದವೆನ್ನಿ. ಅವರು, ಸಿನಿಮಾಟೊಗ್ರಾಫರ್, ನಾಯಕ ಮೂವರೇ ಆ ಸೂಕ್ಷ್ಮ ಪ್ರಸಂಗ ಚಿತ್ರೀಕರಿಸುವ ಸ್ಥಳದಲ್ಲಿ ಇದ್ದರು.

ಮೊದಲಿನಷ್ಟು ಬೇಡಿಕೆ ಇಲ್ಲದ ನಟಿಗೆ ಆ ಸಂದರ್ಭದಲ್ಲಿ ಅದು ಒದಗಿಬಂದಿದ್ದ ಅಪರೂಪದ ಅವಕಾಶವೇ ಆಗಿದ್ದರಿಂದ ಇಂಥವಕ್ಕೆಲ್ಲ 'ಒಲ್ಲೆ' ಎನ್ನಲಾಗುತ್ತಿರಲಿಲ್ಲ.

ಎಲ್ಲರಂಥಲ್ಲದ ನಟಿ ಅವರು. ಕಂಗಳಲ್ಲಿ ಹೊಳಪಿನ ಕುಲುಮೆ. ಭರತನಾಟ್ಯದಲ್ಲಿ ಭಾವಗಳನ್ನು ತುಳುಕಿಸಲು ಬಾಲ್ಯದಿಂದಲೇ ಬಳಸಿದ ಆ ಕಣ್ಣುಗಳಲ್ಲಿ ಕಾಂತಿ. ಆಪ್ತೇಷ್ಟರು ವಿಶಾಲಾಕ್ಷಿ ಎಂಬ ಗುಣವಿಶೇಷಣ ಕೊಟ್ಟದ್ದೂ ಅದೇ ಕಾರಣಕ್ಕೆ. ದಾವಣಗೆರೆಯ ಎವಿಕೆ ಕಾಲೇಜಿನ ಆಸುಪಾಸಿನಲ್ಲಿ ಅವರು ಮೂಡಿಸಿದ್ದ ಹೆಜ್ಜೆಗುರುತುಗಳನ್ನು ನೆನೆಯುವವರು ಇದ್ದಾರೆ. ಆ ಕಾಲದಲ್ಲಿಯೇ ನೀಳಕಾಲುಗಳು ಕಾಣುವಂತೆ ಬಟ್ಟೆ ಧರಿಸುವಷ್ಟು ದಿಟ್ಟೆಯಾಗಿದ್ದ ಅವರ ಕುರಿತು ಅನೇಕರಿಗೆ ಬೆರಗೂ ಇತ್ತು. 'ಮಿಸ್ ದಾವಣಗೆರೆ' ಆಗುವುದೆಂದರೆ ತಮಾಷೆಯಾ?

ರಮೇಶ್ ಅರವಿಂದ್‌ಗೆ ಇಬ್ಬರು ನಾಯಕಿಯರಿದ್ದ ಸಿನಿಮಾದಲ್ಲಿ ಒಬ್ಬರಾಗಿ ಜನಮನ ಗೆದ್ದಮೇಲೆ ಅನೇಕ ನಿರ್ಮಾಪಕ, ನಿರ್ದೇಶಕರು ಅವಕಾಶ ಕೊಡಲು ಮುಂದಾದರು. ಹಾಗಂತ ಬಂದ ಅವಕಾಶಗಳಿಗೆಲ್ಲ ಹ್ಞೂಂಗುಡಲಿಲ್ಲ. ಪಾತ್ರಗಳನ್ನು ಅಳೆದರು, ತೂಗಿದರು. ಅದೇ ಕಾರಣಕ್ಕೆ ಮೂರು ಸಲ ಅವರಿಗೆ ರಾಜ್ಯ ಪ್ರಶಸ್ತಿ ಸಂದದ್ದು. ಗಿನ್ನೆಸ್ ದಾಖಲೆ ಪುಸ್ತಕ ಸೇರಿದ ಕನ್ನಡ ಸಿನಿಮಾದ ನಟಿ ಅವರಾದದ್ದೂ ಹೆಗ್ಗಳಿಕೆ. ಚಿತ್ರಗಳಲ್ಲಿ ಅವಕಾಶ ಕಡಿಮೆಯಾಗುತ್ತಿದ್ದಂತೆ ತಮ್ಮದೇ ನಿರ್ಮಾಣ ಸಂಸ್ಥೆಯೊಂದನ್ನು ತೆರೆದರು. ಅಷ್ಟಕ್ಕೇ ಸುಮ್ಮನಾಗಲಿಲ್ಲ. ರಾಜಕೀಯಕ್ಕೂ ಕಾಲಿಟ್ಟರು. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಮತದಾರರ ಎದುರು ಹೋದರು. ಇನ್ನೊಂದು ವಿಧಾನಸಭಾ ಚುನಾವಣೆ ಸಮೀಪಿಸಿದ್ದೇ ತಡ ಅವರು ಗುರಿಯಾಗಿಸಿಕೊಂಡಿರುವ ಕ್ಷೇತ್ರಕ್ಕೇ ಕಾಲಿಟ್ಟರು. ಸುದ್ದಿಗೋಷ್ಠಿ ನಡೆಸಿದರು. ಹತ್ತಿರದ ಊರಿನ ದೇವರಿಗೆ ಕೈಮುಗಿದರು.

ಅದಕ್ಕೂ ಕೆಲವೇ ದಿನಗಳ ಮೊದಲು, ಮೈಸೂರಿನಲ್ಲಿ ಸ್ಪಾವೊಂದರ ಕೆಲಸಗಾರ್ತಿ ಹಾಸ್ಯನಟರಿಬ್ಬರು ತಮ್ಮ ಜೊತೆ ಕೆಟ್ಟದಾಗಿ ನಡೆದುಕೊಂಡರು ಎಂದು ಆರೋಪಿಸಿದ್ದಕ್ಕೂ ಅವರು ಪ್ರತಿಕ್ರಿಯೆ ಕೊಟ್ಟಿದ್ದರು. 'ನನಗೆ ಅಲ್ಲಿ ಏನು ನಡೆದಿದೆ ಎನ್ನುವುದು ಗೊತ್ತಿಲ್ಲ. ಆದರೆ, ಭಾರತದ ಸ್ಪಾಗಳಲ್ಲಿ ಪುರುಷರಿಗೆ ಗಂಡಸರೇ ಮಸಾಜ್ ಮಾಡುತ್ತಾರೆ. ಹೆಣ್ಣುಮಕ್ಕಳಿಗೆ ಲಲನೆಯರ ಅಂಗಮರ್ದನ ಸಹಜ' ಎಂದಷ್ಟೇ ಹೇಳಿದ್ದರು. 'ನಾನು ಸ್ಮಾಲ್‌ಟೌನ್ ಹುಡುಗಿ. ಚುನಾವಣೆಗೆ ನಿಂತರೆ ಅಂಥ ಕಡೆಯೇ ನಿಲ್ಲುವೆ' ಎಂದು ಆಗಲೇ ಅರ್ಜಿ ಗುಜರಾಯಿಸಿದ್ದರು.

ನಂದಿನಿ ಎಂಬ ಅವರ ಮೂಲ ಹೆಸರು ಈಗ ಎಷ್ಟೋ ಜನರಿಗೆ ಮರೆತೇಹೋಗಿದೆ.

● ವಿಶಾಖ ಎನ್.

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68